ಆರ್.ಐ.ಡಿ.ಎಫ್–14ರ ಯೋಜನೆಯಡಿ ಸರ್ಕಾರದಲ್ಲಿ ಸ್ವೀಕೃತವಾಗಿದೆ. ಈ ಸೇತುವೆಯು ಗ್ರಾಮೀಣ ರಸ್ತೆಯ ಮೇಲೆ ಬರುತ್ತದೆ. ಈ ಕಾಮಗಾರಿಯು ಆರ್.ಐ.ಡಿ.ಎಫ್–14ರ ಕ್ರಿಯಾ ಯೋಜನೆಯಲ್ಲಿ ಸೇರಿರುವುದಿಲ್ಲವಾದ್ದರಿಂದ ಪ್ರಸ್ತುತ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿಲ್ಲ.

215 ಶ್ರೀ ಲಾಲಾಜಿ ಆರ್.ಮೆಂಡನ್ (ಕಾಪು)
ಮಾನ್ಯ ಲೋಕೋಪಯೋಗಿ ಸಚಿವರು

ಅ) ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆಯ ಸುವರ್ಣ ನದಿಗೆ ಸೇತುವೆಯನ್ನು ನಿರ್ಮಿಸಲು ಕೆ.ಆರ್.ಡಿ.ಸಿ.ಎಲ್ ಮುಖಾಂತರ 320 ಲಕ್ಷ ರೂಪಾಯಿಗಳಿಗೆ ಪ್ರಸ್ತಾವನೆ ಅನುಮೋದಿಸಲ್ಪಟ್ಟಿದೆಯೇ;

ಕಾಪು ವಿಧಾನಸಭಾ ಕ್ಷೇತ್ರದ ಕುಕ್ಕೆಹಳ್ಳಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೆಳ್ಳಂಪಲ್ಲಿ–ಪರೀಕ ಮಧ್ಯೆ ಸುವರ್ಣ ನದಿಗೆ ಸೇತುವೆಯ ನಿರ್ಮಾಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವತಿಯಿಂದ ರೂ.4.08 ಕೋಟಿಗಳ ಮೊತ್ತದಲ್ಲಿ ತೆಗೆದುಕೊಳ್ಳಲು ಯೋಜಿಸಿದೆ.

ಆ) ಅನುಮೋದಿಸಲ್ಪಟ್ಟಿದ್ದಲ್ಲಿ ಈ ಕಾಮಗಾರಿ ಆರಂಭವಾಗಿದೆಯೇ?

ಈ ಸೇತುವೆಯ ಯೋಜನಾ ವರದಿಯನ್ನು ತಯಾರಿಸಲು ಸಮಾಲೋಚಕರನ್ನು ನೇಮಿಸಲಾಗಿದ್ದು, ಸಮಾಲೋಚಕರು ಯೋಜನಾ ವರದಿಯನ್ನು ತಯಾರಿಸಿ ಸಲ್ಲಿಸಿದ್ದು, ವರದಿಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ತಾಂತ್ರಿಕ ಸಮಿತಿ ಮತ್ತು ಮಂಡಳಿ ಅನುಮೋದನೆಯಾದ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

219 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)
ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು.

ಅ ಬೀದರ್ ಜಿಲ್ಲೆಯ ಭಾಲ್ಕಿ ಪಟ್ಟಣಕ್ಕೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸುಧಾರಿತ ನೀರು ಸರಬರಾಜು ಯೋಜನೆಯಡಿಯಲ್ಲಿ (ಆರ್.ಸಿ.ಸಿ. ವೆಂಟೆಡ್ ಬ್ಯಾರೇಜ್) ಕಾಮಗಾರಿಗೆ ಯಾವಾಗ ಅನುಮೋದನೆ ನೀಡಲಾಯಿತು; ಇದರ ಯೋಜನಾ ವೆಚ್ಚ ಎಷ್ಟು; ಇದಕ್ಕೆ ಎಷ್ಟು ಕಾಲಮಿತಿಯನ್ನು ನಿಗಧಿಪಡಿಸಲಾಗಿತ್ತು?